# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.–5056/2013/ಪಿ.ಪಿ.

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು 560 001
ದಿನಾಂಕ: 21/9/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(3) ರನ್ವಯ ವರದಿ

**ವಿಷಯ:** (1) ಶ್ರೀ ಹನುಮಂತರಾಯಪ್ಪ, ತಹಶೀಲ್ದಾರ್, ತಾಲ್ಲೂಕು ಕಛೇರಿ, ವಿರಾಜಪೇಟೆ ಹಾಲಿ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು;

(2)ಶ್ರೀ ಎಂ.ಪಿ.ಕುಶಾಲಪ್ಪ, ಅಧ್ಯಕ್ಷರು, ಲ್ಯಾಂಡ್ ಗ್ರ್ಯಾಂಟ್ ಕಮಿಟಿ, ವಿರಾಜಪೇಟೆ ಮತ್ತು;

(3)ಶ್ರೀ ಸಿ.ಪಿ.ಗಣೇಶ್, ಗುಮಾಸ್ತರು, ತಾಲ್ಲೂಕು ಕಛೇರಿ, ವಿರಾಜಪೇಟೆ, ಹಾಲಿ ಪ್ರಥಮ ದರ್ಜೆ ಸಹಾಯಕರು, ಪಟ್ಟಣ ಪಂಚಾಯಿತಿ (ನಿಯೋಜನೆ ಮೇರೆಗೆ) ವಿರಾಜಪೇಟೆ

ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದುರ್ನಡತೆ/ ದುರ್ವರ್ತನೆಯಿಂದ ನಡೆದುಕೊಂಡಿರುವ–ಕುರಿತು.,

*****

ಶ್ರೀ ಮದನ್ ವಿ.ಟಿ. ತಂದೆ ತಿಮ್ಮಯ್ಯ ವಿ.ಎನ್., ಆರ್ಜಿ ಗ್ರಾಮ, ವೀರಾಜಪೇಟೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ ಹನುಮಂತರಾಯಪ್ಪ, ತಹಶೀಲ್ದಾರ್, ತಾಲ್ಲೂಕು ಕಛೇರಿ, ವಿರಾಜಪೇಟೆ ಹಾಲಿ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, (2) ಶ್ರೀ ಜಯಕುಮಾರ್, ರಾಜಸ್ವ ನಿರೀಕ್ಷಕರು, ವಿರಾಜಪೇಟೆ ಹೋಬಳಿ, ವಿರಾಜಪೇಟೆ, (3) ಶ್ರೀ ಎಂ.ಪಿ.ಕುಶಾಲಪ್ಪ, ಅಧ್ಯಕ್ಷರು, ಲ್ಯಾಂಡ್ ಗ್ರ್ಯಾಂಟ್ ಕಮಿಟಿ, ವಿರಾಜಪೇಟೆ ಮತ್ತು, (4) ಶ್ರೀ ಸಿ.ಪಿ.ಗಣೇಶ್, ಗುಮಾಸ್ತರು, ತಾಲ್ಲೂಕು ಕಛೇರಿ, ವಿರಾಜಪೇಟೆ, ಹಾಲಿ ಪ್ರಥಮ ದರ್ಜೆ ಸಹಾಯಕರು, ಪಟ್ಟಣ ಪಂಚಾಯಿತಿ (ನಿಯೋಜನೆ ಮೇರೆಗೆ) ವಿರಾಜಪೇಟೆ (ಇನ್ನು ಮುಂದೆ '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ದ ಒಂದು ದೂರನ್ನು ಸಲ್ಲಿಸಿ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರುದಾರರು ತಮ್ಮ ದೂರಿನಲ್ಲಿ ವಿರಾಜಪೇಟೆ ತಾಲ್ಲೂಕು, ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷರಾದ 3ನೇ ಎದುರುದಾರರು ರಕ್ತ ಸಂಬಂಧಿಕರ ಹೆಸರಿನಲ್ಲಿ ಹಾಗೂ ಅವರ ಹೆಸರಿನಲ್ಲಿ ಎದುರುದಾರರೊಂದಿಗೆ ಶಾಮೀಲಾಗಿ ಸಾಗುವಳಿ ಚೀಟಿಯನ್ನು ಪಡೆದುಕೊಂಡಿರುತ್ತಾರೆ. ಎದುರುದಾರರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಹಾಗೂ ಭ್ರಷ್ಟಾಚಾರವನ್ನು ಮಾಡಿ ಸರ್ಕಾರಿ ಜಾಗವನ್ನು ಅಕ್ರಮವಾಗಿ ದೂರಿನಲ್ಲಿ ನಮೂದಿಸಿದ 11 ಜನ ಸಂಬಂಧಿಕರಿಗೆ ಒಟ್ಟು 50.74 ಎಕರೆ ಸರ್ಕಾರಿ ಜಾಗವನ್ನು ಕರ್ನಾಟಕ ಲ್ಯಾಂಡ್ ಗ್ರ್ಯಾಂಟ್ ನಿಯಮವನ್ನು ಉಲ್ಲಂಘಿಸಿ ಮತ್ತು ಭ್ರಷ್ಟಾಚಾರ ನಿಗ್ರಹ ಕಾಯಿದೆಯನ್ನು ಉಲ್ಲಂಘಿಸಿ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ. ಈ ಆಸ್ತಿಗಳ ಮೇಲೆ ಸಬ್ಸಿಡಿ ಮೂಲಕ ಕೆ.ಡಿ.ಸಿ.ಸಿ. ಬ್ಯಾಂಕು ನಿಯಮಿತ ವಿರಾಜಪೇಟೆ ಇಲ್ಲಿಂದ ಸಾಲವನ್ನು ಪಡೆದಿರುತ್ತಾರೆ. ಎದುರುದಾರರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟಾಗಿರುತ್ತದೆ. ಸದರಿ 11 ಜನ ವ್ಯಕ್ತಿಗಳಿಗೆ ಸಾಕಷ್ಟು ಸ್ವಂತ ಆಸ್ತಿಯು ಇರುತ್ತದೆ. ಆದರೂ ಎದುರುದಾರರು ಭ್ರಷ್ಟಾಚಾರದಲ್ಲಿ ಭಾಗಿಯಾಗಿರುತ್ತಾರೆ ಎಂದು ದೂರು ಸಲ್ಲಿಸಿರುತ್ತಾರೆ.

3. 2005ನೇ ಸಾಲಿನಿಂದ 2010-11ನೇ ಸಾಲಿನವರೆಗೆ ನೀಡಲಾದ ಅಕ್ರಮ ಸಕ್ರಮ ಯೋಜನೆಯಲ್ಲಿ ಸಾಗುವಳಿ ಚೀಟಿ ವಿತರಿಸಿದ ಬಗ್ಗೆ ಮಾಹಿತಿ ನೀಡಲು ಆರ್.ಟಿ.ಐ. ಅಡಿ ಅರ್ಜಿಯನ್ನು ಪಿರ್ಯಾದುದಾರರು ಸಲ್ಲಿಸಿದ್ದು, ಆರ್.ಟಿ.ಐ. ಅಡಿ ಪಡೆದ ಮಾಹಿತಿಯ ಪ್ರತಿಗಳನ್ನು ದೂರಿನೊಂದಿಗೆ ಸಲ್ಲಿಸಿರುತ್ತಾರೆ. 3ನೇ ಎದುರುದಾರರ ಹೆಸರಿಗೆ ಮತ್ತು 3ನೇ ಎದುರುದಾರರ ಸಂಬಂಧಿಕರ ಹೆಸರಿಗೆ ನೀಡಿದ 2010-11ನೇ ಸಾಲಿನ ಆರ್.ಟಿ.ಸಿ. ನಕಲು ಪ್ರತಿಗಳು ಸದರಿಯವರಿಗೆ ಸಂಬಂಧಪಟ್ಟ ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳನ್ನು ಪಿರ್ಯಾದುದಾರರು ಹಾಜರುಪಡಿಸಿರುತ್ತಾರೆ.

4. ದೂರಿನ ಆರೋಪಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರನ್ನು ಕೋರಲಾಗಿದ್ದು, ಜಿಲ್ಲಾಧಿಕಾರಿ, ಕೊಡಗುರವರು ತಹಶೀಲ್ದಾರ್ ವಿರಾಜಪೇಟೆರವರಿಂದ ತನಿಖೆಯನ್ನು ನಡೆಸಿ ವರದಿ ದಿನಾಂಕ 29/1/2014ನ್ನು ಸಲ್ಲಿಸಿರುತ್ತಾರೆ. ಈ ವರದಿಯಂತೆ, ಅಕ್ರಮ-ಸಕ್ರಮ ಸಮಿತಿ ಅಧ್ಯಕ್ಷರಾದ 3ನೇ ಎದುರುದಾರರು, ಅವರ ಮತ್ತು ಅವರ ಸಂಬಂಧಿಕರ ಹೆಸರಿನಲ್ಲಿ ನಿಯಮಬಾಹಿರವಾಗಿ ಜಾಗ ಸಕ್ರಮಗೊಳಿಸಿದ್ದು ಫಲಾನುಭವಿಗಳ ವಿವರ ಸಲ್ಲಿಸಿರುತ್ತಾರೆ. ದೂರಿನಲ್ಲಿ

ನಮೂದಿಸಿರುವ 11 ಜನರ ಹೆಸರಿಗೆ ಮಂಜೂರಾಗಿದ್ದು, ಸದರಿಯವರ ವಿವರ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ. | ಹೆಸರು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| 1. | ಎಂ.ಕೆ.ಪಾರ್ವತಿ | ಹೆಗ್ಗಳ | 219/1 | 4.95 |
| 2. | ಎಂ.ಪಿ. ಚಿಣ್ಣಪ್ಪ | ಹೆಗ್ಗಳ | 219/1 | 4.60 |
| 3. | ತಾರಾ ಚಿಣ್ಣಪ್ಪ | ಹೆಗ್ಗಳ | 219/12 | 4.95 |
| 4. | ಎಂ.ಕೆ.ಕುಟ್ಟಪ್ಪ | ಹೆಗ್ಗಳ | 219/27 | 4.90 |
| 5. | ಎಂ.ಪಿ.ಸುಬ್ರಮಣಿ | ಹೆಗ್ಗಳ | 219/ಬಿ10 | 4.90 |
| 6. | ಶ್ರೀಮತಿ ಕಾಮವ್ವ | ಹೆಗ್ಗಳ | 219/34 | 4.90 |
| 7. | ಎಂ.ಪಿ.ಕುಶಾಲಪ್ಪ | ಹೆಗ್ಗಳ | 219/2 | 4.90 |
| 8. | ಎಂ.ಪಿ.ಸುಬ್ರಮಣಿ | ಹೆಗ್ಗಳ | 219/31 | 4.90 |
| 9. | ಎಂ.ಕೆ.ಪೊನ್ನಪ್ಪ | ಹೆಗ್ಗಳ | 219/33 | 4.90 |
| 10. | ಎಂ.ಪಿ.ಕುಶಾಲಪ್ಪ | ಹೆಗ್ಗಳ | 219/32 | 4.90 |
| 11. | ಎಂ.ಕೆ.ಭೀಮಯ್ಯ | ಕೆದಮುಳ್ಳೂರು | 501/2 | 5.00 |

ಮಂಜೂರಾತಿದಾರರಲ್ಲಿ ಶ್ರೀ ಎಂ.ಪಿ.ಸುಬ್ರಮಣಿ ರವರಿಗೆ ಹೆಗ್ಗಳ ಗ್ರಾಮದ ಸರ್ವೆ ನಂ. 219/ಬಿ10 ರಲ್ಲಿ 4.90 ಎಕರೆ ಜಾಗ ಮಂಜೂರಾಗಿದ್ದು, ಸದರಿ ಜಾಗವು ದುರಸ್ತಿಯಾಗಿ 219/31 ರಲ್ಲಿ ದಾಖಲಾಗಿರುತ್ತದೆ ಹಾಗೂ ಶ್ರೀ ಎಂ.ಪಿ.ಕುಶಾಲಪ್ಪ ಇವರಿಗೆ ಹೆಗ್ಗಳ ಗ್ರಾಮದ ಸರ್ವೆ ನಂ. 219/2 ರಲ್ಲಿ 4.90 ಎಕರೆ ಜಾಗ ಮಂಜೂರಾಗಿದ್ದು, ಸದರಿ ಜಾಗವು ದುರಸ್ತಿಯಾಗಿ 219/32 ಎಂದು ದಾಖಲಾಗಿರುತ್ತದೆ. ನಿಯಮ ಬಾಹಿರವಾಗಿ ಸಕ್ರಮಗೊಳಿಸಿರುವ ಎಲ್ಲಾ ಮಂಜೂರಾತಿದಾರರಿಗೆ ಸಂಬಂಧಿಸಿದ ಮೂಲ ಕಡತಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ ಅಧಿನಿಯಮ 108 ರಲ್ಲಿ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಲು ಸಹಾಯಕ ಆಯುಕ್ತರು, ಮಡಿಕೇರಿ ಉಪ ವಿಭಾಗ, ಮಡಿಕೇರಿ ಇವರಿಗೆ ಮೇಲ್ಮನವಿ ಸಲ್ಲಿಸಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ.

5. ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶದ ಪ್ರತಿಗಳನ್ನು ತನಿಖಾ ಅವಧಿಯಲ್ಲಿ ಸಂಗ್ರಹಿಸಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ, ಎಂ.ಸಿ. ತಾರಾ, ಎಂ.ಪಿ. ಚಿಣ್ಣಪ್ಪ, ಎಂ.ಕೆ. ಪಾರ್ವತಿ, 3ನೇ ಎದುರುದಾರರು, ಎಂ.ಪಿ. ಸುಬ್ರಮಣಿ ಇವರಿಗೆ ವಿರಾಜಪೇಟೆ ತಾಲ್ಲೂಕು ಅಕ್ರಮ-ಸಕ್ರಮ ಸಮಿತಿಯಲ್ಲಿ ಮಾಡಿರುವ ವಿರಾಜಪೇಟೆ ತಾ:ಹೆಗ್ಗಳ ಗ್ರಾಮದ ಸರ್ವೆ ನಂ.219ರ ಜಮೀನಿನ ಮಂಜೂರಾತಿಯಲ್ಲಿ ಕರ್ನಾಟಕ ಭೂ ಕಂದಾಯ

ನಿಯಮ 108ಕೆ ಪ್ರಕಾರ ವಜಾಗೊಳಿಸಿ ಸದರಿ ಜಮೀನನ್ನು ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು 2014ನೇ ಸಾಲಿನಲ್ಲಿ ಆದೇಶವಾಗಿರುತ್ತದೆ.

6. 4ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶವಾಗಿದ್ದು, ಜಿಲ್ಲಾಧಿಕಾರಿಗಳು ದಿ.26.11.2013ರ ಆದೇಶದಲ್ಲಿ ಮಂಡನಾಧಿಕಾರಿಗಳನ್ನು ನೇಮಿಸಿರುತ್ತಾರೆ. ಸದರಿ ಆದೇಶದ ಪ್ರತಿ ಸಲ್ಲಿಸಿರುತ್ತಾರೆ.

7. 3ನೇ ಎದುರುದಾರರು ಮತ್ತು ಅವರ ಸಂಬಂಧಿಕರು ಕಾನೂನು ಬಾಹಿರವಾಗಿ ಸಾಗುವಳಿ ಚೀಟಿ ಪಡೆದ ಆರ್.ಟಿ.ಸಿ. ಮತ್ತು ಮ್ಯುಟೇಷನ್ ಕಾಪಿಯ ನಕಲು ಪ್ರತಿಗಳನ್ನು 3ನೇ ಎದುರುದಾರರು ಸಲ್ಲಿಸಿದ ಆಸ್ತಿ ಘೋಷಣೆ ಮಾಡಿರುವ ಪ್ರಮಾಣ ಪತ್ರದ ನಕಲು ಪ್ರತಿ, ಸಾಗುವಳಿ ಚೀಟಿ ಪಡೆದ ಫಲಾನುಭವಿಗಳ ಪಟ್ಟಿ ಪ್ರತಿಗಳನ್ನು ತನಿಖಾ ಅವಧಿಯಲ್ಲಿ ಸಂಗ್ರಹಿಸಲಾಗಿರುತ್ತದೆ.

8. ದೂರುದಾರರ ದೂರಿನ ಮೇಲೆ ಎದುರುದಾರರುಗಳಿಗೆ ತಿಳುವಳಿಕೆ ಪತ್ರಗಳನ್ನು ನೀಡಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಒಂದನೇ ಎದುರುದಾರರಾದ ಶ್ರೀ ಹನುಮಂತರಾಯಪ್ಪ, ಅಂದಿನ ತಹಶೀಲ್ದಾರರು, ವಿರಾಜಪೇಟೆ ತಾಲ್ಲೂಕು ರವರು ತಮ್ಮ ಆಕ್ಷೇಪಣೆಯಲ್ಲಿ, ತಾನು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿ ಕಾರ್ಯ ವರದಿ ಮಾಡಿಕೊಳ್ಳುವ ಪೂರ್ವದಲ್ಲಿ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಮಂಜೂರಾತಿ ಕೋರಿ ನಿಗದಿತ ನಮೂನೆ 50 ಮತ್ತು 53 ರನ್ನು ಅರ್ಹ ಫಲಾನುಭವಿಗಳು ಸರ್ಕಾರಿ ಜಮೀನಿಗೆ ಅರ್ಜಿ ಸಲ್ಲಿಸಿಕೊಂಡಿದ್ದು, ಸಲ್ಲಿಸಿರುವ ಅರ್ಜಿಗಳ ಆಧಾರದ ಮೇಲೆ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಮೋಜಣಿದಾರರು ಸ್ಥಳ ಪರಿಶೀಲನೆ ನಡೆಸಿ ಅನುಭವದ ಆಧಾರದ ಮೇಲೆ ಕಡತ ತಯಾರಿಸಿ ಕಛೇರಿಗೆ ಸಲ್ಲಿಸಿದ್ದು, ತಮ್ಮ ವರದಿಯಲ್ಲಿ ಪ್ರಸ್ತಾಪಿಸಿರುವಂತೆ ಪೂರ್ಣ ಮಾಹಿತಿ ಹಾಗೂ ಅಗತ್ಯ ದಾಖಲೆಗಳ ಆಧಾರದ ಮೇರೆಗೆ ಕಡತಗಳನ್ನು ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಮುಂದೆ ಮಂಡಿಸುವ ಪೂರ್ವದಲ್ಲಿ ಸಂಬಂಧಪಟ್ಟ ಶಿರಸ್ತೆದಾರರು ಮತ್ತು ವಿಷಯ ನಿರ್ವಾಹಕರು ಸಮಿತಿ ಸದಸ್ಯ ಕಾರ್ಯದರ್ಶಿಯಾದ ತಹಶೀಲ್ದಾರ್ ರವರ ಅನುಮೋದನೆಗೆ ಸಲ್ಲಿಸಬೇಕಾಗಿದ್ದು, ಆ ಸಂದರ್ಭದಲ್ಲಿ ಶಿರಸ್ತೆದಾರರು ಮತ್ತು ವಿಷಯ ನಿರ್ವಾಹಕರು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ನಿಯಮ 108ಎಫ್ ಮತ್ತು 108ಜೆ

ಯನ್ನು ಸರ್ಕಾರದ ಸುತ್ತೋಲೆ ಮತ್ತು ಅಂಗಿದಾಗ್ಗೆ ಸದರಿ ವಿಷಯ ಕುರಿತು ಹೊರಡಿಸಿರುವ ತಿದ್ದುಪಡಿ ನಿಯಮಾವಳಿಗಳನ್ನು ಪರಿಶೀಲಿಸಿ ಅದರಂತೆ ಮಂಜೂರಾತಿ ಕಡತದಲ್ಲಿ ಉಲ್ಲೇಖಿಸಿ ಸಲ್ಲಿಸಬೇಕಾಗಿರುತ್ತದೆ. ಉಪ ವಿಭಾಗಾಧಿಕಾರಿಯವರು ತಹಶೀಲ್ದಾರರು ಸಲ್ಲಿಸಿರುವ ಮೇಲ್ಮನವಿಯಂತೆ ವಿಚಾರಣೆ ನಡೆಸಿದ್ದು, ಕರ್ನಾಟಕ ಭೂಕಂದಾಯ ನಿಯಮಾವಳಿ 1966ರ ನಿಯಮ 108ಕೆ ರ ಅನ್ವಯ ಅರ್ಜಿದಾರರ ದೂರಿನಲ್ಲಿ ನಮೂದಿಸಿರುವ 9 ಮಂಜೂರಾತಿದಾರರ ಪೈಕಿ (1) ಶ್ರೀಮತಿ ಎಂ.ಸಿ. ತಾರ ಚೆಣ್ಣಪ್ಪ, (2) ಶ್ರೀ ಎಂ.ಪಿ.ಕುಶಾಲಪ್ಪ, (3) ಶ್ರೀ ಎಂ.ಪಿ.ಚೆಣ್ಣಪ್ಪ ಮತ್ತು, (4) ಶ್ರೀಮತಿ ಎಂ.ಕೆ.ಪಾರ್ವತಿ ಇವರ ಮಂಜೂರಾತಿಯನ್ನು ವಜಾಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಆದೇಶಿಸಿರುತ್ತಾರೆ. ಹಾಗೂ ಶ್ರೀ ಎಂ.ಪಿ.ಸುಬ್ರಮಣಿ ಇವರ ಮಂಜೂರಾತಿಯನ್ನು ಯಥಾಸ್ಥಿತಿಯಲ್ಲಿ ಕಾಪಾಡುವಂತೆ ಆದೇಶಿಸಿರುತ್ತಾರೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಅಡಿಷನಲ್ ರಿಜಿಸ್ಟ್ರಾರ್ (ವಿಚಾರಣೆಗಳು-7)ರವರಲ್ಲಿ ಪ್ರಕರಣ ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ಎಂ.ವೈ.ಎಸ್/ 2533/2014/ಎ.ಆರ್.ಇ-7 ಈ ಹಿಂದೆ ದಾಖಲಾಗಿದ್ದು, ಈ ಬಗ್ಗೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಸಂಖ್ಯೆ: 2266/2016, ದಿನಾಂಕ: 06/06/2016 ರಲ್ಲಿ ಒಂದು ಆದೇಶವನ್ನು ಮಾಡಿದ್ದು, ಪ್ರಸ್ತುತ ಮೇಲ್ಕಂಡ ಪ್ರಕರಣದ ನಡವಳಿಕೆಗಳನ್ನು ವಜಾ ಮಾಡಿ ಆದೇಶ ಮಾಡಿರುತ್ತದೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ವಿಚಾರಣೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ದಿನಾಂಕ: 18/01/2017 ರಂದು ಕ್ರಿಮಿನಲ್ ಪಿಟಿಷನ್ ನಂ. 7927/2016 ರಲ್ಲಿ ತಡೆಯಾಜ್ಞೆ ಆದೇಶವನ್ನು ಮಾಡಿರುತ್ತದೆ ಎಂದು ನಮೂದಿಸಿರುತ್ತಾರೆ.

9. ಎರಡನೇ ಎದುರುದಾರರಾದ ಶ್ರೀ ಜಯಕುಮಾರ್, ಕಂದಾಯ ನಿರೀಕ್ಷಕರು, ವಿರಾಜಪೇಟೆ ಹೋಬಳಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆರವರು ತನ್ನ ಆಕ್ಷೇಪಣೆಯಲ್ಲಿ ಅಕ್ರಮ-ಸಕ್ರಮ ಸಮಿತಿಯ ಅನರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಿರುವ ಸಂಬಂಧದಲ್ಲಿ ನನ್ನ ಪಾತ್ರ ಇರುವುದಿಲ್ಲ. ನಾನು ದುರ್ನಡತೆ ಎಗಲು ಕಾರಣವಾಗಿಲ್ಲ ಎಂಬುದನ್ನು ಸರ್ಕಾರವು ಮನಗೊಂಡು ನನ್ನ ವಿರುದ್ಧ ವಿಚಾರಣೆಗೆ ವಹಿಸುವ ಅಗತ್ಯತೆ ಇಲ್ಲವೆಂದು ನಿರ್ಣಯಿಸಲಾಗಿರುತ್ತದೆ. ಉಪ ವಿಭಾಗಾಧಿಕಾರಿಯವರು ತಹಶೀಲ್ದಾರ್ ಸಲ್ಲಿಸಿರುವ ಮೇಲ್ಮನವಿಯನ್ನು ವಿಚಾರಣೆ ನಡೆಸಿದ್ದು, ಕರ್ನಾಟಕ ಭೂಕಂದಾಯ ನಿಯಮಾವಳಿ 1966ರ ನಿಯಮ 108 ರನ್ವಯ ಅರ್ಜಿದಾರರ ದೂರಿನಲ್ಲಿ

ನಮೂದಿಸಿರುವ ಒಂಬತ್ತು ಮಂಜೂರಾತಿದಾರರ ಪೈಕಿ ಶ್ರೀಮತಿ ಎಂ.ಸಿ.ತಾರಾ ಚೆಣ್ಣಪ್ಪ, ಶ್ರೀ ಎಂ.ಪಿ.ಕುಶಾಲಪ್ಪ, ಶ್ರೀ ಎಂ.ಸಿ.ಚೆಣ್ಣಪ್ಪ ಮತ್ತು ಶ್ರೀಮತಿ ಎಂ.ಕೆ.ಪಾರ್ವತಿ ಇವರ ಮಂಜೂರಾತಿಯನ್ನು ವಜಾಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಆದೇಶಿಸಿರುತ್ತಾರೆ. ಅಕ್ರಮ-ಸಕ್ರಮ ಸಮಿತಿಯಲ್ಲಿ ತಾನು ಕಾರ್ಯ ನಿರ್ವಹಿಸಿರುವುದಿಲ್ಲ, ಭೂಮಂಜೂರಾತಿ ಬಗ್ಗೆ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ, ಭೂ ಮಂಜೂರಾತಿಯನ್ನು ಅಕ್ರಮ-ಸಕ್ರಮ ಸಮಿತಿಯು ಮಾಡಬೇಕಾಗಿದ್ದು, ಇದು ರಾಜಸ್ವ ನಿರೀಕ್ಷಕರ ಕಾರ್ಯ ವ್ಯಾಪ್ತಿಗೆ ಒಳಪಡಿಸುವುದಿಲ್ಲ ಎಂದು ನಮೂದಿಸಿರುತ್ತಾರೆ.

10. 3ನೇ ಎದುರುದಾರರಾದ ಶ್ರೀ ಎಂ.ಪಿ.ಕುಶಾಲಪ್ಪ, ಅಧ್ಯಕ್ಷರು, ಜಮೀನು ಸಕ್ರಮೀಕರಣ ಸಮಿತಿ, ವಿರಾಜಪೇಟೆರವರಿಗೆ ನೋಟಿಸ್ ಜಾರಿಯಾಗಿದ್ದರೂ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

11. 4ನೇ ಎದುರುದಾರ ಶ್ರೀ ಸಿ.ಪಿ.ಗಣೇಶ್, ಗುಮಾಸ್ತ, ತಾಲ್ಲೂಕು ಕಛೇರಿ, ವಿರಾಜಪೇಟೆರವರು ತನ್ನ ಆಕ್ಷೇಪಣೆಯಲ್ಲಿ, ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ರಚಿಸಲಾದ ಸಮಿತಿಗೆ ತಾನು ಕಡತಗಳನ್ನು ಮಂಡಿಸುವ ಸಮಯದಲ್ಲಿ ಎಲ್ಲಾ ಕಡತಗಳಲ್ಲಿ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಚೆಕ್ ಮೆಮೋಗಳಲ್ಲಿ ಮಂಜೂರಾತಿಗೆ ಶಿಫಾರಸ್ಸು ಮಾಡಿ ವರದಿಸಿದ ಮೇರೆಗೆ ಸಮಿತಿಗೆ ಮಂಡಿಸಿರುವುದಾಗಿ, ಮಂಜೂರಾತಿ ಆದ ನಂತರ ಕಡತಗಳು ಮರಳಿ ಎಂ.ಸಿ. ನಡವಳಿಕೆಗೆ ಕಂದಾಯ ಪರಿವೀಕ್ಷಕರ ಕಛೇರಿಗೆ ಕಳುಹಿಸಲಾಗಿವುದಾಗಿ, ದೂರಿನ ವಿಚಾರಣೆಗೆ ಹೆದರಿ ಕಂದಾಯ ಪರಿವೀಕ್ಷಕರುಗಳು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ತಾವು ಹಿಂದೆ ಬರೆದ ಚೆಕ್‌ಲಿಸ್ಟ್‌ಗಳನ್ನು ತಿದ್ದುಪಡಿ ಮಾಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

12. ಒಂದನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವ ದೂರು ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್./2533/2014 ಪ್ರಕರಣದ ಕಡತ ಪರಿಶೀಲಿಸಲಾಗಿ ಆ ಪ್ರಕರಣದಲ್ಲಿ ತನಿಖೆಗೆ ಕೈಗೊಂಡ ಫಲಾನುಭವಿಗಳು (ಹೆಗ್ಗಳ ಗ್ರಾಮದ ಸರ್ವೇ ನಂ. 219/12ರಲ್ಲಿ ಶ್ರೀಮತಿ ತಾರಾ ಚೆಣ್ಣಪ್ಪರವರಿಗೆ ಮಂಜೂರಾದ 4.95 ಎಕರೆ ಜಮೀನನ್ನು ಹೊರತುಪಡಿಸಿ) ಮತ್ತು ಅವರುಗಳಿಗೆ ಮಂಜೂರಾದ ಜಮೀನುಗಳು ಬೇರೆಯಾಗಿದ್ದು, ಪ್ರಸ್ತುತ ಪ್ರಕರಣದಲ್ಲಿನ ಅಂಶಗಳಿಗೆ ತಾಳೆಯಾಗದೆ ಇರುವುದು ಕಂಡುಬಂದಿರುತ್ತದೆ.

13. ತನಿಖಾ ವರದಿಯಲ್ಲಿ ಕಂಡುಬಂದ ಅಂಶಗಳು:

(1) ವಿರಾಜಪೇಟೆ ತಾಲ್ಲೂಕು ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷರಾದ 3ನೇ ಎದುರುದಾರರು ತಮ್ಮ ಹೆಸರಿನಲ್ಲಿ ಮತ್ತು ಅವರ ರಕ್ತ ಸಂಬಂಧಿಗಳ ಹೆಸರಿನಲ್ಲಿ ನಿಯಮಬಾಹಿರವಾಗಿ ಜಮೀನನ್ನು ಸಕ್ರಮಗೊಳಿಸಿರುವುದಾಗಿ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರು ತಮ್ಮ ವರದಿಯಲ್ಲಿ 11 ಜನರ ಹಸರು ಸರ್ವೆ ನಂಬರ್‌ಗಳ ವಿವರ, ವಿಸ್ತೀರ್ಣದ ವಿವರಗಳನ್ನು ನಮೂದಿಸಿರುತ್ತಾರೆ.

(2) ಉಪ ವಿಭಾಗಾಧಿಕಾರಿಗಳು 2014ನೇ ಸಾಲಿನಲ್ಲಿ ಮಾಡಿರುವ ಆದೇಶದ ದಾಖಲೆಗಳಿಂದ ಅಕ್ರಮ ಸಕ್ರಮ ಸಮಿತಿಯು ಸರ್ವೆ ನಂ. 219ರ ಜಮೀನಿನಲ್ಲಿ ಮಾಡಿರುವ ಮಂಜೂರಾತಿ ಆದೇಶವನ್ನು ವಜಾಗೊಳಿಸಿ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲು ಆದೇಶ ಮಾಡಿರುತ್ತಾರೆ. ಜವಾಬ್ದಾರಿಯುತ ವ್ಯಕ್ತಿಗಳಾದ 1, 3 ಮತ್ತು 4ನೇ ಎದುರುದಾರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(3) ಈ ಸಂಸ್ಥೆಯಲ್ಲಿ ದಾಖಲಾಗಿದ್ದ ದೂರು ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ ಎಂವೈಎಸ್/2533/2014ರ ದಾಖಲೆಗಳಿಂದ ಈ ಮೇಲಿನ ಕಂಡಿಕೆ (4)ರಲ್ಲಿ ನಮೂದಿಸಿರುವ ಶ್ರೀಮತಿ ತಾರಾ ಚೆಣ್ಣಪ್ಪರವರಿಗೆ ಮಂಜೂರಾದ ಸರ್ವೇ ನಂ.219/12ರಲ್ಲಿನ 4.95 ಎಕರೆ ಜಮೀನನ್ನು ಹೊರತುಪಡಿಸಿ, ಉಳಿದ ಸರ್ವೆ ನಂಬರ್‌ಗಳ ವಿವರ ಮತ್ತು ಜಮೀನಿನ ವಿಸ್ತೀರ್ಣ ಈ ಪ್ರಕರಣಕ್ಕೆ ತಾಳೆಯಾಗುವುದಿಲ್ಲ.

(4) 4ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶವಾಗಿದ್ದು ಇಲಾಖಾ ವಿಚಾರಣೆ ನಡೆದ ಬಗ್ಗೆಯಾಗಲೀ, ಆದೇಶವಾದ ಬಗ್ಗೆಯಾಗಲೀ ಯಾವುದೇ ದಾಖಲೆಗಳನ್ನು 4ನೇ ಎದುರುದಾರರು ಈ ಸಂಸ್ಥೆಗೆ ತನಿಖಾ ಅವಧಿಯಲ್ಲಿ ಸಲ್ಲಿಸಿರುವುದಿಲ್ಲ.

(5) ಮೇಲೆ ನಮೂದಿಸಿದ ಎಲ್ಲಾ ಕಾರಣಗಳಿಂದ 1, 3 ಮತ್ತು 4ನೇ ಎದುರುದಾರರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸರ್ಕಾರಿ ಜಾಗಗಳಿಗೆ ಅಕ್ರಮವಾಗಿ ನಿಯಮ ಬಾಹಿರವಾಗಿ ಸಾಗುವಳಿ ಚೀಟಿಗಳನ್ನು ನೀಡಿ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

14. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(i) ರಿಂದ (iii) ರನ್ವಯ 1, ಮತ್ತು 4ನೇ ಎದುರುದಾರರು ಈ ಕೆಳಕಂಡ ಜಮೀನುಗಳನ್ನು ನಿಯಮಬಾಹಿರವಾಗಿ ಫಲಾನುಭವಿಗಳ ಹೆಸರಿಗೆ ಸಕ್ರಮೀಕರಣಗೊಳಿಸಲು ಭಾಗೀದಾರರಾಗಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

| ಕ್ರ.ಸಂ. | ಹೆಸರು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| 1. | ಎಂ.ಕೆ.ಪಾರ್ವತಿ | ಹೆಗ್ಗಳ | 219/1 | 4.95 |
| 2. | ಎಂ.ಪಿ. ಚಿಣ್ಣಪ್ಪ | ಹೆಗ್ಗಳ | 219/1 | 4.60 |
| 3. | ಎಂ.ಕೆ.ಕುಟ್ಟಪ್ಪ | ಹೆಗ್ಗಳ | 219/27 | 4.90 |
| 4. | ಎಂ.ಪಿ.ಸುಬ್ರಮಣಿ | ಹೆಗ್ಗಳ | 219/ಬಿ10 | 4.90 |
| 5. | ಶ್ರೀಮತಿ ಕಾಮವ್ವ | ಹೆಗ್ಗಳ | 219/34 | 4.90 |
| 6. | ಎಂ.ಪಿ.ಕುಶಾಲಪ್ಪ | ಹೆಗ್ಗಳ | 219/2 | 4.90 |
| 7. | ಎಂ.ಪಿ.ಸುಬ್ರಮಣಿ | ಹೆಗ್ಗಳ | 219/31 | 4.90 |
| 8. | ಎಂ.ಕೆ.ಪೊನ್ನಪ್ಪ | ಹೆಗ್ಗಳ | 219/33 | 4.90 |
| 9. | ಎಂ.ಪಿ.ಕುಶಾಲಪ್ಪ | ಹೆಗ್ಗಳ | 219/32 | 4.90 |
| 10. | ಎಂ.ಕೆ.ಭೀಮಯ್ಯ | ಕೆದಮುಳ್ಳೂರು | 501/2 | 5.00 |

15. **ಆದುದರಿಂದ 1ನೇ ಎದುರುದಾರರಾದ-ಶ್ರೀ ಹನುಮಂತರಾಯಪ್ಪ**, ತಹಶೀಲ್ದಾರ್, ತಾಲ್ಲೂಕು ಕಛೇರಿ, ವಿರಾಜಪೇಟೆ ಹಾಲಿ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ಮತ್ತು, **4ನೇ ಎದುರುದಾರಾದ-ಶ್ರೀ ಸಿ.ಪಿ.ಗಣೇಶ್**, ಗುಮಾಸ್ತರು, ತಾಲ್ಲೂಕು ಕಛೇರಿ, ವಿರಾಜಪೇಟೆ, ಹಾಲಿ ಪ್ರಥಮ ದರ್ಜೆ ಸಹಾಯಕರು, ಪಟ್ಟಣ ಪಂಚಾಯಿತಿ (ನಿಯೋಜನೆ ಮೇರೆಗೆ) ವಿರಾಜಪೇಟೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

16. 3ನೇ ಎದುರುದಾರರಾದ-ಶ್ರೀ ಎಂ.ಪಿ.ಕುಶಾಲಪ್ಪ, ಅಧ್ಯಕ್ಷರು, ಲ್ಯಾಂಡ್ ಗ್ರ್ಯಾಂಟ್ ಕಮಿಟಿ, ವಿರಾಜಪೇಟೆ ರವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ದಿನಾಂಕ: 15/03/2010 ರಂದು

ಸರ್ಕಾರವು ನೇಮಿಸಿದ್ದು ಸದರಿಯವರ ವಿರುದ್ಧ ನಿಯಮಾನುಸಾರ ಸರ್ಕಾರವು ಸೂಕ್ತ ಕ್ರಮ ಜರುಗಿಸಬಹುದಾಗಿದೆ.

17. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 22/8

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.